# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 831 |
| ಸದಸ್ಯರ ಹೆಸರು | ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13.07.2023 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ನಗರದಲ್ಲಿ ಸೈನ್ಸ್ ಪಾರ್ಕ್ ನಿರ್ಮಾಣ ಮಾಡಲಾಗಿದೆಯೇ; ಹಾಗಿದ್ದಲ್ಲಿ, ಯಾವಾಗ ಎಲ್ಲಿ ಸ್ಥಾಪನೆಗೊಂಡಿದೆ: (ವಿವರ ನೀಡುವುದು) | ಬಳ್ಳಾರಿ ನಗರದ ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರುವು ಪ್ರದೇಶದ ಸುಮಾರು 10 ಎಕರೆ ಜಮೀನಿನಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ನಿರ್ಮಾಣ ಮಾಡಲಾಗಿದ್ದು, ದಿನಾಂಕ:05.03.2014 ರಂದು ಉದ್ಘಾಟನೆಗೊಂಡಿದೆ. ಸದರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಅಂದಾಜು 8.05 ಎಕರೆ ಪ್ರದೇಶದಲ್ಲಿ ಹೊರಾಂಗಣ ವಿಜ್ಞಾನ ಉದ್ಯಾನವನವನ್ನು ಸ್ಥಾಪಿಸಲಾಗಿರುತ್ತದೆ. |
| ಆ) | ಈ ಸೈನ್ಸ್ ಪಾರ್ಕ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಅವರುಗಳ ಕಾರ್ಯಗಳು ಹುದ್ದೆಗಳೊಂದಿಗೆ ಪೂರ್ಣ ವಿವರ ನೀಡುವುದು) | ಬಳ್ಳಾರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಒಟ್ಟು 10 ಜನ ಸಿಬ್ಬಂದಿಗಳು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಸಿಬ್ಬಂದಿಗಳ ಹುದ್ದೆ, ಕಾರ್ಯಗಳ ಪೂರ್ಣ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಇ) | ಈ ಸೈನ್ಸ್ ಪಾರ್ಕ್‌ನ ಅಭಿವೃದ್ಧಿ ಮತ್ತು ನಿರ್ವಹಣೆಗೆ ಅನುದಾನ ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಎಷ್ಟು ಅನುದಾನ ನೀಡಲಾಗಿದೆ: (ಕಳೆದ ಮೂರು ವರ್ಷಗಳ ವಿವರ ನೀಡುವುದು) | ಬಳ್ಳಾರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ವಹಣೆಗೆ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನದ ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ. |
| ಈ) | ಬಳ್ಳಾರಿ ನಗರದಲ್ಲಿರುವ ಈ ಸೈನ್ಸ್ ಪಾರ್ಕ್ ನಲ್ಲಿ ಸರಿಯಾದ ನಿರ್ವಹಣೆ ಇಲ್ಲದೆ ಪಾಳು ಬಿದ್ದು, ಅಲ್ಲಿಗೆ ಬರುವ ಪ್ರವಾಸಿಗರಿಗೆ ನಿರಾಸೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದ ಕ್ರಮಗಳೇನು: ಯಾವ ಕಾಲ ಮಿತಿಯಲ್ಲಿ ಈ ಕಾರ್ಯವನ್ನು ಮಾಡಲಾಗುವುದು? (ಮಾಹಿತಿ ನೀಡುವುದು) | ವಿಜ್ಞಾನ ಕೇಂದ್ರದ ಹೊರಾಂಗಣದ ವಿಜ್ಞಾನ ಉದ್ಯಾನವನದಲ್ಲಿ ಕೆಲವು ಸಿಮೆಂಟ್‌ನಿಂದ ತಯಾರಿಸಲ್ಪಟ್ಟ(ಹಳೆಯ) ಪ್ರಾಣಿಗಳ ಮಾದರಿಗಳು ಹಾಳಾಗಿದ್ದು ಮತ್ತು ಮುಖ್ಯ ಕಟ್ಟಡದ ನೆಲ ಮಾಳಿಗೆಯ ಹೊರಾಂಗಣದಲ್ಲಿರುವ ನೆಲಹಾಸು (ಗ್ರಾನೈಟ್) ಹಾಳಾಗಿದ್ದು, ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರದ ಮುಖಾಂತರ ಇವುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಐಟಿಬಿಟಿ 107 ಎಸ್ ಟಿಎಸ್ 2023**

**(ಎನ್.ಎಸ್.ಬೋಸರಾಜು)**
ಮಾನ್ಯ ಸಣ್ಣ ನೀರಾವರಿ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

## ಅನುಬಂಧ-1

**ಬಳ್ಳಾರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ:**

| ಕ್ರ. ಸಂ | ಸಿಬ್ಬಂದಿಯ ಹೆಸರು | ಹುದ್ದೆ | ಕಾರ್ಯಗಳು |
|---|---|---|---|
| 1 | ಶಿವರಾಜ. ಜಿ.ವಿ | ಕ್ಯುರೇಟರ್ | ವಿಜ್ಞಾನ ಕೇಂದ್ರದ ಕಛೇರಿ ಮತ್ತು ಎಲ್ಲಾ ಕಾರ್ಯಕ್ರಮಗಳ ನಿರ್ವಹಣೆಯ ಜವಾಬ್ದಾರಿ. |
| 2 | ಮುಸ್ತಾಫ.ಪಿ | ಶೈಕ್ಷಣಿಕ ಸಹಾಯಕ | ಶೈಕ್ಷಣಿಕ ಕಾರ್ಯಕ್ರಮಗಳ ಆಯೋಜನೆ, ಸಂದರ್ಶಕರ ನಿರ್ವಹಣೆ, ವಿಜ್ಞಾನ ಗ್ಯಾಲರಿಗಳ (ಒಳಾಂಗಣ) ನಿರ್ವಹಣೆ ಇತ್ಯಾದಿ |
| 3 | ಗೌರಮ್ಮ | ತಾಂತ್ರಿಕ ಸಹಾಯಕಿ | ವಿಜ್ಞಾನ ಕೇಂದ್ರದಲ್ಲಿರುವ ಗ್ಯಾಲರಿಗಳು ಮತ್ತು ಅವುಗಳಲ್ಲಿರುವ ಮಾದರಿಗಳ ನಿರ್ವಹಣೆ ಇತ್ಯಾದಿ |
| 4 | ಟಿ. ಲಕ್ಷ್ಮಣ | ತಂತ್ರಜ್ಞ | ವಿಜ್ಞಾನ ಕೇಂದ್ರದಲ್ಲಿರುವ ಗ್ಯಾಲರಿಗಳು, ಜನರೇಟರ್, ಹೈಮಾಸ್ಟ ದೀಪ, ಫೌಂಟೆನ್, ಹೊರಾಂಗಣ ಮಾದರಿಗಳ ಶಬ್ಧ ಮತ್ತು ದೀಪಗಳ ನಿರ್ವಹಣೆ ಇತ್ಯಾದಿ |
| 5 | ಸದ್ದಾಮ್ ಹುಸೇನ್. ಎನ್ | ತಂತ್ರಜ್ಞ | ವಿಜ್ಞಾನ ಕೇಂದ್ರದಲ್ಲಿರುವ ತಾರಾಲಯ, ಸಭಾಂಗಣ, ಟೆಲಿಸ್ಕೋಪ್, ಹೊರಾಂಗಣದಲ್ಲಿರುವ ಸೈನ್ಸ್ ಪಾರ್ಕ್‌ನ ನಿರ್ವಹಣೆ ಇತ್ಯಾದಿ |
| 6 | ರವಿ ಕುಮಾರ್. ಆರ್ | ಎಸ್.ಡಿ.ಎ | ವಿಜ್ಞಾನ ಕೇಂದ್ರದ ಅಕೌಂಟ್ಸ್ ಸಂಬಂಧಿಸಿದ ಕಡತಗಳು, ಕ್ಯಾಶ್ ಬುಕ್, ಲೆಡ್ಜರ್ ಬುಕ್ ಮತ್ತು ಇತರೆ ಕಡತಗಳು ಹಾಗೂ ವಿಜ್ಞಾನ ಕೇಂದ್ರದ ವರದಿಗಳ ನಿರ್ವಹಣೆ ಇತ್ಯಾದಿ |
| 7 | ತಿಪ್ಪೇಸ್ವಾಮಿ.ಟಿ.ಎನ್ | ಎಸ್.ಡಿ.ಎ | ವಿಜ್ಞಾನ ಕೇಂದ್ರದ ಟಿಕೇಟ್ ನಿರ್ವಹಣೆ, ಬ್ಯಾಂಕ್ ನಿರ್ವಹಣೆ, ಇನ್ ವರ್ಡ್, ಔಟ್ ವರ್ಡ, ಸ್ಟಾಕ್ ರಿಜಿಸ್ಟರ್, RTI ಮಾಹಿತಿಗಳ ನಿರ್ವಹಣೆ ಇತ್ಯಾದಿ |
| 8 | ಪರಶುರಾಮ. ಹೆಚ್ | ಗಾರ್ಡನರ್ | ವಿಜ್ಞಾನ ಕೇಂದ್ರದ ಹೊರಾಂಗಣದಲ್ಲಿರುವ ಸೈನ್ಸ್ ಪಾರ್ಕ್, ವಿಕಾಸ ವನ, ಆಮೆ ಮತ್ತು ಮೊಲಗಳ ಕೊಠಡಿ, ಕುಡಿಯುವ ನೀರಿನ ಟ್ಯಾಂಕ್, ಸುತ್ತಲಿನ ಉದ್ಯಾನವನ ನಿರ್ವಹಣೆ ಇತ್ಯಾದಿ |
| 9 | ಗಾದಿಲಿಂಗಪ್ಪ.ಕೆ | ಗಾರ್ಡನರ್ | ವಿಜ್ಞಾನ ಕೇಂದ್ರದ ಹೊರಾಂಗಣದಲ್ಲಿರುವ ಪ್ರಾಣಿಗಳ ಮಾಡೆಲ್, ಎಮು ಮತ್ತು ಟರ್ಕಿಗಳ ಕೊಠಡಿಗಳ ನಿರ್ವಹಣೆ, ಮಕ್ಕಳ ಆಟದ ವಲಯ ಮತ್ತು ಸುತ್ತಲಿನ ಉದ್ಯಾನವನ ನಿರ್ವಹಣೆ |
| 10 | ಉದಯ್ ಕುಮಾರ್. ಹೆಚ್ | ಅಟೆಂಡರ್ | ವಿಜ್ಞಾನ ಕೇಂದ್ರದಲ್ಲಿರುವ ನೆಲ ಮಹಡಿ ಮತ್ತು ಮೊದಲನೆಯ ಮಹಡಿಯ ಎಲ್ಲಾ ಕೊಠಡಿಗಳ ಸ್ವಚ್ಛತೆ ಹಾಗೂ ಮೀನುಗಳ ಕೊಠಡಿಯ ನಿರ್ವಹಣೆ |

**ಅನುಬಂಧ-2**

**ಬಳ್ಳಾರಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ವಹಣೆಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನದ ವಿವರ ಕೆಳಗಿನಂತಿದೆ:**

| ಆರ್ಥಿಕ ವರ್ಷ | ಬಿಡುಗಡೆಯಾದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|
| 2020-21 | 20.00 |
| 2021-22 | 35.00 |
| 2022-23 | 25.00 |